# ಧನ್ವಂತರಿ ಸುಳಾದಿ

## ೧. ಧ್ರುವ ತಾಳ

ಆಯುವೃದ್ಧಿ ಆಗುವುದು ಯಶಸ್ಸು ಬರುವುದು
ಕಾಯ ನಿರ್ಮಲನ ಕಾರಣವಹುದು ।
ಮಾಯೆ ಹಿಂದಾಗುವುದು ನಾನಾ ರೋಗದ ಬೀಜ
ಬೇಯಿಸಿ ಕಳೆವುದು ವೇಗದಿಂದ
ನಾಯಿ ಮೊದಲಾದ ಕುತ್ಸಿತ ದೇಹ ನಿ-
ಕಾಯವ ತೆತ್ತು ದುಷ್ಕರ್ಮದಿಂದ ।
ಕ್ರಿಯಮಾಣ ಸಂಚಿತ ಭರಿತವಾಗಿದ್ದ ದುಃಖ
ಹೇಯ ಸಾಗರದೊಳು ಬಿದ್ದು ಬಳಲಿ
ನೋಯಿಸಿಕೊಂಡು ನೆಲೆಗಾಣದೆ ಒಮ್ಮೆ ತನ್ನ ಬಾಯಲಿ
ವೈದ್ಯ ಮೂರುತಿ ಶ್ರೀ ಧನ್ವಂತರಿ ।
ರಾಯ ರಾಜೌಷಧ ನಿಯಾಮಕ ಕರ್ತು
ಶ್ರೀಯರಸನೆ ಎಂದು ತುತಿಸಲಾಗಿ ।
ತಾಯಿ ಒದಗಿ ಬಂದು ಬಾಲನ್ನ ಸಾಕಿದಂತೆ ।
ನೋಯಗೊಡದೆ ನಮ್ಮನ್ನು ಪಾಲಿಪಾ ।
ಧ್ಯೇಯಾ ದೇವಾದಿಗಳಿಗೆ ಧರ್ಮಜ್ಞಗುಣಸಾಂದ್ರ ।
ಶ್ರೇಯಸ್ಸು ಕೊಡುವನು ಭಜಕರಿಗೆ ।

ಮಾಯ-ಮಂತ್ರದಿಂದ ಜಗವೆಲ್ಲ ವ್ಯಾಪಿಸಿ ।
ನ್ಯಾಯವಂತನಾಗಿ ಚೇಷ್ಟೆ ಮಾಳ್ಪ ।
ವಾಯು ವಂದಿತ ನಿತ್ಯ ವಿಜಯ ವಿಟ್ಠಲರೇಯಾ ।
ಪ್ರಿಯನು ಕಾಣೋ ನಮಗೆ ಅನಾದಿ ರೋಗ ಕಳೆವಾ ।

೧. ಮಟ್ಟೆ ತಾಳ

ಧನ್ವಂತರಿ ಸಿರಿ ಧನ್ವಂತರಿಯೆಂದು ।
ಸನ್ನುತಿಸಿ ಸತತ ಭಿನ್ನ ಜ್ಞಾನದಿಂದ ।
ನಿನ್ನವ ನಿನ್ನವನೆಂದು ಘನತೆಯಲಿ ನೆನೆದ ಮನುಜ ।
ಘನ್ನ ಮೂರುತಿ ಒಲಿದು ನಲಿವ ಭು
ವನದೊಳು ಧನ್ಯನು ಧನ್ಯನೆನ್ನಿ ।
ಚೆನ್ನ ಮೂರುತಿ ಸುಪ್ರಸನ್ನ ವಿಜಯ ವಿಠ-
ಲನ್ನ ನಿತ್ಯನೆಂದು ಬಣ್ಣಿಸು ಬಹು ವಿಧದಿ ॥

೨. ತ್ರಿಪುಟ ತಾಳ

ಶಶಿಕುಲೋತ್ಥ ದೀರ್ಘತಮ ನಂದನ ದೇವ ದೇವಾ ।
ಶಶಿವರ್ಣ ಪ್ರಕಾಶ ಪ್ರಭುವೆ ವಿಭುವೆ ।
ಶಶಿಮಂಡಲ ಸಂಸ್ಥಿತ ಕಲಶ ಪಾಣಿ ।

ಬಿಸಜಲೋಚನ ಆಶ್ವಿನೇಯ ವಂದ್ಯ ।
ಶಶಿಗರ್ಭ ಭೂರುಹಲತೆ ಪೊದೆ ರೋಗವ ತಾ ಓಡಿಸುವ ।
ಔಷಧಿ ತುಳಸಿ ಜನಕ ವಸುದೇವ ।
ಅಸುರ ನಿರ್ಜರತತಿ ನೆರೆದು ಗಿರಿಯ ತಂದು ।
ಮಿಸುಕದಲೆ ಮಹೋದಧಿ ಮಥಿಸಲಾಗಿ ।
ನಸು ನಗುತ ಪುಟ್ಟಿದೆ ಪೀಯೂಷ ಘಟ ಧರಿಸಿ ।
ಅಸಮ ದೈವವೆ ನಿನ್ನ ಮಹಿಮೆಗೆ ನಮೋ ನಮೋ ।
ಬಿಸಜ ಸಂಭವ ರುದ್ರ ಮೊದಲಾದ ದೇವತಾ
ಋಷಿನಿಕರ ನಿನ್ನ ಕೊಂಡಾಡುವುದು ।
ದಶ ದಿಶದೊಳು ಮೆರೆವ ವಿಜಯ ವಿಟ್ಠಲ ।
ಭೀಷಣ ಅಸು ಇಂದ್ರಿಯಗಳ ರೋಗ ನಿವಾರಣ ॥

## ೪. ಆಟ ತಾಳ

ಶರಣು ಶರಣು ಧನ್ವಂತರಿ ತಮಗುಣನಾಶ ।
ಶರಣು ಆರ್ತಜನ ಪರಿಪಾಲಕ ದೇವ ।
ತರುವೆ ಭವತಾಪ ತರಣ ದಿತಿಸುತ ಹರಣ ಮೋಹಕಲ್ಪ ।
ಪರಮ ಪೂರ್ಣ ಬ್ರಹ್ಮ ಬ್ರಹ್ಮ ಉದ್ಧಾರಕ ।
ಉರುಪರಾಕ್ರಮ ಉರಗಶಾಯಿ ।

ವರ ಕಿರೀಟ ಮಹಾಮಣಿ ಕುಂಡಲ ಕರ್ಣ ।
ಮಿರುಗುವ ಹಸ್ತ ಕಂಕಣ ಹಾರ ಪದಕ ।
ಹೀರ ಕಾಂಚಿ ಪೀತಾಂಬರ ಚರಣ ಭೂಪ ।
ಸಿರಿವತ್ಸಲಾಂಛನ ವಿಜಯ ವಿಟ್ಠಲ ಪ್ರಿಯ ।
ತರುಣ ಗಾತ್ರ ಜ್ಞಾನ ಮುದ್ರಾಂಕಿತ ಹಸ್ತ ॥

೫. ಆದಿ ತಾಳ

ಏಳುವಾಗಲಿ ಮತ್ತೆ ತಿರುಗಿ ತಿರುಗುವಾಗಲಿ ।
ಬೀಳುವಾಗಲಿ ನಿಂತು ಕುಳ್ಳಿರುವಾಗಲಿ ।
ಬೀಳುವಾಗಲಿ ಮಾತು ಕೇಳುವಾಗಲಿ ಕರೆದು ।
ಹೇಳುವಾಗಲಿ ಹೋಗಿ ಸತ್ಕರ್ಮ ಮಾಡುವಾಗಲಿ ।
ಬಾಳುವಾಗಲಿ ಭೋಜನ ನಾನಾ ಷಡ್ರಸಾನ್ನಸ-
ಮ್ಮೇಳವಾಗಲಿ ಒಮ್ಮೆ ಪುತ್ರಾದಿಗಳೊಡನೆ ।
ಕೇಳಿ ಮಾಡಲಿ ಮನುಜ ಮರಿಯಾದೆ ತನ್ನಯ ।
ನಾಲಿಗೆ ಕೊನೆಯಲ್ಲಿ ಧನ್ವಂತರಿ ಎಂದು ಒಮ್ಮೆ
ಕಾಲ ಕಾಲದಲ್ಲಿ ಸ್ಮರಿಸಿದರೆ ಆವಾಗ
ವೇಳೆವೇಳೆಗೆ ಬಹುಭವಬೀಜ ಪರಿಹಾರ
ನೀಲಮೇಖಶ್ಯಾ ವಿಜಯವಿಟ್ಠಲರೇಯ
ಓಲಗ ಕೊಡುವನು ಮುಕ್ತರ ಸಂಗದಲ್ಲಿ

ಧನ್ವಂತರೀ ಧನ್ವಂತರಿ ಎಂದು
ಪ್ರಣವ ಪೂರ್ವಕದಿಂದ ವಂದಿಸಿ
ನೆನೆಯಲು ವಿಜಯವಿಟ್ಠಲ ಒಲಿವ ॥

॥ ಶ್ರೀ ಕೃಷ್ಣಾರ್ಪಣಮಸ್ತು ॥